# ಸೆಲೆಬ್ರಿಟಿ

■ ಹನಿ

## ಲಿಂಡ್ಸೆಯ ಅಮಲು



ಹನ್ನೊಂದರ ಎಳವೆಯಲ್ಲೇ ಸಿನಿಮಾ ಪ್ರವೇಶ; 24ರ ಹರೆಯದಲ್ಲಿ ಜೈಲುವಾಸ! ಸೆಲೆಬ್ರಿಟಿ ಜೀವನಕ್ಕೆ ಅಂಕೆ ಇಲ್ಲದಿದ್ದರೆ ಏನೆಲ್ಲ ಆಗಬಹುದು ಎಂಬುದಕ್ಕೆ ಲಿಂಡ್ಸೆ ಲೊಹಾನ್ ಸಾಕ್ಷಿ. ಹಾಲಿವುಡ್ ನಟಿ, ಜನಪ್ರಿಯ ಗಾಯಕಿ, ಪ್ರಖ್ಯಾತ ಮಾಡೆಲ್ – ಹೀಗೆ ಎಳೆಯ ಪ್ರಾಯದಲ್ಲೇ ಎಲ್ಲವೂ ಆಗಿದ್ದ ಲಿಂಡ್ಸೆ ಈಗ ಜೈಲು ಕೋಣೆಯಲ್ಲಿ ಬಂಧಿ.

ಫ್ರೀಕೀ ಫ್ರೈಡೇ, ಮೀನ್ ಗರ್ಲ್ಸ್, ಹರ್ಬಿ: ಫುಲ್ಲೀ ಲೋಡೆಡ್ ಚಿತ್ರಗಳ ಮೂಲಕ ಜನಪ್ರಿಯತೆಯ ತುತ್ತತುದಿಗೇರಿದ ಲಿಂಡ್ಸೆ ಜನಪ್ರಿಯ ಪಾಪ್ ಗಾಯಕಿಯೂ ಆಗಿದ್ದಾಗ ಆಕೆಯನ್ನು ಹಿಡಿಯು ವುದು ಕಷ್ಟವೇ ಆಗಿತ್ತು. ಯಶಸ್ಸು, ಜನಪ್ರಿಯತೆ ಎಲ್ಲವೂ ತಲೆಗೇರಿ ಅದರ ಜತೆಗೆ ಮಾದಕ ದ್ರವ್ಯವೂ ಸೇರಿಕೊಂಡಾಗ ಜೀವನ ದುರಂತದ ಹಾದಿ ಹಿಡಿಯಿತು. 2007ರಲ್ಲಿ ಮಾದಕ ದ್ರವ್ಯದ ಅಮಲಿನಲ್ಲಿ ದಾರಿಹೋಕರ ಮೇಲೆ ಕಾರು ಓಡಿಸಿದ ಲಿಂಡ್ಸೆ, ವಾಹನ ಕಾಯ್ದೆ ಪ್ರಕಾರ ನಿಯಮಿತ ಡ್ರಗ್ ಟೆಸ್ಟ್‌ಗೆ ಒಳಗಾಗಬೇಕಾಯಿತು. ಆದರೆ ಅದರಲ್ಲೂ ತಪ್ಪಿದಾಗ ಸುಧಾರಣಾ ಜೈಲು ಸೇರಬೇಕಾಯಿತು.

ಲಿಂಡ್ಸೆಯ ವಿವಾದಗಳು ಒಂದೆರಡಲ್ಲ. ಇ ಟ್ರೇಡ್ ಎಂಬ ಆನ್‌ಲೈನ್ ದಲ್ಲಾಳಿ ಕಂಪೆನಿ ತನ್ನ ಹೆಸರಿನ ಮಗುವೊಂದನ್ನು ಪ್ರಚಾರಕ್ಕೆ ಬಳಸಿದ್ದನ್ನು ಪ್ರಶ್ನಿಸಿ 100 ದಶಲಕ್ಷ ಡಾಲರ್ ಪರಿಹಾರ ಕೋರಿ ಕೇಸು ಹಾಕಿದ್ದು; ತಂದೆ ಸುಳ್ಳುಗಾರ ಎಂದು ಬಹಿರಂಗವಾಗಿ ದೂಷಿಸಿದ್ದು, ತಾಯಿಯ ಜತೆ ಸೇರಿ ಗಾಸಿಪ್ ವಿರೋಧಿ ವೆಬ್‌ಸೈಟ್ ರೂಪಿಸಿದ್ದು– ಹೀಗೆ ಲಿಂಡ್ಸೆ ಎಂದರೆ ಸುದ್ದಿಸುಗ್ಗಿ. ಎಲ್ಲ ವಿವಾದಗಳ ನಡುವೆಯೂ 2009ರಲ್ಲಿ 'ಲೇಬರ್ ಪೇಯ್ನ್' ಮತ್ತು 2010ರಲ್ಲಿ 'ಮ್ಯಾಕೆಟ್' ಎಂಬ ಚಿತ್ರಗಳಲ್ಲಿ ನಟಿಸಿದರೂ ಬರಖತ್ತಾಗಲಿಲ್ಲ. ಜನವರಿ 23ರವರೆಗೆ ಜೈಲುವಾಸಿಯಾಗಿರುವ ಲಿಂಡ್ಸೆ ಈ ಸಲದ ಡ್ರಗ್ ಟೆಸ್ಟ್‌ನಲ್ಲಿ ಸೋತರೆ ಮತ್ತೆ ನಾಲ್ಕು ತಿಂಗಳು ಜೈಲಿನಲ್ಲೇ ಇರಬೇಕು! 'ಹೊಸ ವರ್ಷಕ್ಕೆ ಹೊಸ ಬದುಕು ಕಟ್ಟಿಕೊಳ್ಳುತ್ತೇನೆ. ಶೂ ಡಿಸೈನರ್ ಆಗಲಿದ್ದೇನೆ' ಎಂದು ಜೈಲಿನಿಂದಲೇ ಆಕೆ ಹೇಳಿಕೆ ನೀಡಿದ್ದಾಳೆ. ಜೈಲಿನಲ್ಲಿ ತರಬೇತಿಯನ್ನೂ ಪಡೆದಿದ್ದಾಳಂತೆ. ಏನಾಗುತ್ತೋ ನೋಡಬೇಕು.

## ಬಿನಾಯಕ 'ಸೇನೆ'

2004ರಲ್ಲಿ ಪೌಲ್ ಹ್ಯಾರಿಸನ್ ಪ್ರಶಸ್ತಿ, ಆ ಬಳಿಕ ಆರ್.ಆರ್.ಖೇತಾನ್ ಚಿನ್ನದ ಪದಕ, 2008ರಲ್ಲಿ ಅಂತರರಾಷ್ಟ್ರೀಯ ಮಟ್ಟದ ಜೊನಾಥನ್ ಮಾನ್ ಪ್ರಶಸ್ತಿ; ಈಗ 2010ರಲ್ಲಿ ಜೀವಾವಧಿ ಜೈಲು ಶಿಕ್ಷೆ!



ಡಾ.ಬಿನಾಯಕ್ ಸೇನ್ ಎಂಬ 'ಬಡವರ ವೈದ್ಯ'ನ ಜೀವನ ಚರಿತ್ರೆ ಬರೆದರೆ ಹತ್ತಾರು ಸಿನಿಮಾಗಳಿಗೆ ಸರಕಾದೀತು!

ಚತ್ತೀಸ್‌ಗಢದ ಆದಿವಾಸಿಗಳ ಮಧ್ಯೆ ವೈದ್ಯಸೇವೆ ನಡೆಸುತ್ತಾ, ಬಡವರ ಹಕ್ಕುಗಳಿಗಾಗಿ ಹೋರಾಡಿದ ಸೇನ್‌ಗೆ ರಾಯಪುರ ಸೆಶನ್ಸ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದ್ದು ದೊಡ್ಡ ವಿಪರ್ಯಾಸ. ಆದರೆ ಮಾನವ ಹಕ್ಕು ಕಾರ್ಯಕರ್ತರ ದೊಡ್ಡದೊಂದು ಸೇನೆಯೇ ಸೇನ್ ಬೆನ್ನಿಗೆ ನಿಂತಿದೆ. ಚತ್ತೀಸ್‌ಗಢ ಮುಕ್ತಿ ಮೋರ್ಚಾದ ಶಹೀದ್ ಆಸ್ಪತ್ರೆಯಲ್ಲಿ ಬಡರೋಗಿಗಳಿಗಾಗಿ ಜೀವ ತೇಯ್ದ ಸೇನ್, ಜೀವಾವಧಿ ಪೂರ್ತಿ ಜೈಲಿನಲ್ಲಿ ಇರಬೇಕೆಂಬ ತೀರ್ಪು ಎಷ್ಟರ ಮಟ್ಟಿಗೆ ಸರಿ.. ಎಂಬ ದೊಡ್ಡ ಚರ್ಚೆಯೇ ನಡೆದಿದೆ. 'ಸೇನ್‌ನಂತಹ ಸೂಕ್ಷ್ಮ ಮನಸ್ಸಿನ ವೈದ್ಯ ದೇಶದ್ರೋಹಿ ಆಗುವುದು ಹೇಗೆ ಸಾಧ್ಯ...' ಎನ್ನುವುದು ಎಲ್ಲರ ಪ್ರಶ್ನೆ. ಪಿಯುಸಿ ಎಲ್‌ನ ರಾಷ್ಟ್ರೀಯ ಉಪಾಧ್ಯಕ್ಷರೂ, ಛತ್ತೀಸ್‌ಗಢ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸೇನ್‌ಗೆ ಶೀಘ್ರ ನೆಮ್ಮದಿ ದೊರತೀತೆ? ಮಾವೋವಾದಿ ಚಳವಳಿಗೆ ತಾತ್ವಿಕ ಬೆಂಬಲ ನೀಡು ವುದು ದೇಶದ್ರೋಹದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಸಾಬೀತು ಪಡಿಸಲು ಸಾಧ್ಯವೆ? 2011 ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದೆ?

## ಭುಟಿಯಾ ಕನಸು

ಕಳೆದ ಮೂರು ತಿಂಗಳಿಂದ ಬೈಚುಂಗ್ ಭುಟಿಯಾ ಫುಟ್‌ಬಾಲ್ ಆಡಿಲ್ಲ. ಮೊಣಕಾಲಿನ ಹಿಂಭಾಗದ ಮಾಂಸ ಖಂಡದ ಸೆಳೆತ ಆತನನ್ನು ಮೆತ್ತಗೆ ಮಾಡಿದೆ. ಆದರೆ ಜನವರಿ 10ರಂದು ಆರಂಭವಾಗಲಿರುವ ಏಷ್ಯಾ ಕಪ್‌ನಲ್ಲಿ ಆಟವಾಡುವ ಆತನ ಕನಸು ಕುಗ್ಗಿಲ್ಲ. ಈ ಸಲ ಏಷ್ಯಾ ಕಪ್‌ನಲ್ಲಿ ಭಾರತ ತಂಡ ಮಹತ್ವದ್ದನ್ನು ಸಾಧಿಸಲೇಬೇಕು ಎನ್ನುವುದು ಭಾರತ ತಂಡದ ಈ ನಾಯಕನ ಕನಸು.

ಭಾರತದ್ದು ವಿಶ್ವ ಫುಟ್‌ಬಾಲ್‌ನಲ್ಲಿ 122ನೆ ಸ್ಥಾನ. ಏಷ್ಯಾದ ದೇಶಗಳಲ್ಲಿ 21ನೆ ಸ್ಥಾನ. ಹಾಗಾಗಿ ಏಷ್ಯಾ ಕಪ್‌ನಲ್ಲಿ ನಮ್ಮವರು ಕಡಿದು ಕಟ್ಟೆ ಹಾಕುವಂತಹದ್ದು ಏನೂ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ದೊಡ್ಡ ತಂಡವೊಂದನ್ನು ಒಮ್ಮೆ ಕೆಡವಿದರೂ ಮುಂದಿನ ರ್‍ಯಾಂಕಿಂಗ್‌ಗೆ ನೆರವಾಗುತ್ತದೆ ಎನ್ನುವುದು ಭುಟಿಯಾ ಲೆಕ್ಕಾಚಾರ.

17 ವರ್ಷಗಳ ಹಿಂದೆ ಭುಟಿಯಾ ಈಸ್ಟ್ ಬೆಂಗಾಲ್ ತಂಡಕ್ಕೆ ಸೇರಿದಾಗ ತಿಂಗಳಿಗೆ 4 ಸಾವಿರ ರೂಪಾಯಿ ಸಂಬಳ ಪಡೆದದ್ದುಂಟು. ಆಟ ಕುದುರಿದಂತೆಯೇ ಭುಟಿಯಾ ಬೆಲೆ ಏರಿತು. ವರ್ಷಕ್ಕೆ 40 ಲಕ್ಷ ರೂಪಾಯಿವರೆಗೂ ಬೆಲೆ ಬಂತು. ಯೂರೋಪಿಯನ್ ಸ್ಟಾರ್ ಕ್ಲಬ್‌ಗಳಲ್ಲಿ ವಾರಕ್ಕೆ 165,000 ಡಾಲರ್ ಜೇಬಿಗಿಳಿಸುವ ಆಟಗಾರರ ಮುಂದೆ ಇದು ಜುಜುಬಿಯೇ. ಕ್ಲಬ್ ರಾಜಕೀಯದ ಒಳಸುಳಿಗೆ ಸಿಕ್ಕು ಹೊರನಡೆದ ಭುಟಿಯಾ ಮತ್ತೆ ಈಸ್ಟ್ ಬೆಂಗಾಲ್ ತಂಡಕ್ಕೆ ಮರಳಿದ್ದಾರೆ. ಈ ಮಧ್ಯೆ ಏಷ್ಯಾ ಕಪ್ ಬಂದಿದೆ. 3 ತಿಂಗಳಿಂದ ದುಬೈನಲ್ಲೇ ಸೈಕ್ಲಿಂಗ್ ಸಹಿತ ಫಿಟ್‌ನೆಟ್ ಸರ್ಕಸ್ ನಡೆಸಿರುವ ಭುಟಿಯಾ ಚಿಕಿತ್ಸೆಗಾಗಿ ಸರ್ಜನ್ ಡಾ.ಕಣ್ಣನ್‌ರನ್ನು ದುಬೈಗೆ ಕರೆಸಿಕೊಂಡಿದ್ದಾನೆ. ಏಷ್ಯಾ ಕಪ್‌ನಲ್ಲಿ ಗೆಲ್ಲುವ ಆತನ ಕನಸು ನನಸಾಗಲಿ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65